# ಎಂದೆಂದು ನಿನ್ನ ಪಾದವೆ ಗತಿಯೆನಗೆ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** The lyrics given without highlights are as per Ref. 2. The wordings in Ref. 2 are same as in Ref. 3. But the lyrics are different in Ref. 1 and are given separately in yellow highlights.
5. **Note:** The singer has followed the wordings as in Ref. 2.

| | |
|---|---|
| ರಾಗ ಕಾಂಬೋಜಿ ತಾಳ ತ್ರಿಪುಟ | ರಾಗ ಪಿಲ್ಲು ತಾಳ ಅಟ |
| ಎಂದೆಂದು ನಿನ್ನ ಪಾದವೆ ಗತಿಯೆನಗೆ | ಎಂದೆಂದಿಗೂ ನಿನ್ನ ಪಾದವೆ ಗತಿಯೋ |
| ಗೋವಿಂದ ಬಾರಯ್ಯ ಎನ್ನ ಹೃದಯ ಮಂದಿರಕೆ ॥ ಪ ॥ | ಗೋವಿಂದ ಬಾರೈ ಎನ್ನ ಹೃದಯ ಮಂದಿರಕೆ |
| ಮೊದಲಿಂದ ಬರಬಾರದೆ ನಾ ಬಂದೆ | ಮೊದಲಿಲ್ಲಿ ಬರಬಾರದು ನಾ ಬಂದೆ |
| ಇದರಿಂದ ಗೆದ್ದು ಪೋಪುದು ಕಾಣೆ ಮುಂದೆ | ತುದಿ ಮೊದಲಿಲ್ಲದ ಭವದಿಂದ ನೊಂದೆ |
| ತುದಿ ಮೊದಲಿಲ್ಲದೆ ಪರರಿಂದ ನೊಂದೆ | ಇದರಿಂದ ಗೆದ್ದು ಹೋಗುವುದೆಂತು ಮುಂದೆ |
| ಪದುಮನಾಭನೆ ತಪ್ಪು ಕ್ಷಮೆ ಮಾಡೊ ತಂದೆ ॥ 1 ॥ | ಪದುಮನಾಭನೆ ತಪ್ಪು ಕ್ಷಮೆ ಮಾಡು ತಂದೆ |
| ಹೆಣ್ಣು ಹೊನ್ನು ಮಣ್ಣಿನಾಸೆಗೆ ಬಿದ್ದು | ಹೆಣ್ಣು ಹೊನ್ನು ಮಣ್ಣಿನಾಸೆಗೆ ಬಿದ್ದು |
| ಪುಣ್ಯ ಪಾಪವನು ನಾ ತಿಳಿಯದೆ ಇದ್ದು | ಪುಣ್ಯ ಪಾಪಂಗಳ ನಾನರಿತಿದ್ದು |
| ಅನ್ಯಾಯವಾಯಿತು ಇದಕೇನು ಮದ್ದು | ಅನ್ಯಾಯವಾಯಿತು ಇದಕೇನು ಮದ್ದು |
| ನಿನ್ನ ಧ್ಯಾನ ಎನ್ನ ಹೃದಯದೊಳಿದ್ದು ॥ 2 ॥ | ನಿನ್ನ ಧ್ಯಾನವ ಕೊಡು ಹೃದಯದೊಳಿದ್ದು |
| ಹಿಂದೆ ನಾ ಮಾಡಿದ ಪಾಪವ ಕಳೆಯೊ | ಹಿಂದೆ ನಾ ಮಾಡಿದ ಪಾಪವ ಕಳೆದು |
| ಮುಂದೆನ್ನ ಜನ್ಮ ಸಫಲ ಮಾಡಿ ಪೊರೆಯೊ | ಮುಂದೆನ್ನ ಜನ್ಮ ಸಫಲ ಮಾಡಿ ಪೊರೆದು |
| ತಂದೆ ಶ್ರೀ ಪುರಂದರ ವಿಠಲನ ನೆನೆಯೊ | ತಂದೆ ಶ್ರೀ ಪುರಂದರ ವಿಠಲ ನೀನಿಂದು |
| ಎಂದೆಂದಿಗಾನಂದ ಸುಖವನ್ನೆ ಕರೆಯೊ ॥ 3 ॥ | ಬಂದು ಸಲಹೊ ನನ್ನ ಹೃದಯದಿ ನಿಂದು |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇಲ್ಲಿ ದಾಸರು ದೇವರನ್ನು ಹೃದಯದಲ್ಲಿ ವಾಸಿಸುವಂತೆ ಆವಾಹನ ಮಾಡಿದ್ದಾರೆ.

**ಭವ** = ಜನ್ಮ

**ಪುಣ್ಯ ಪಾಪಂಗಳ ನಾನರಿತಿದ್ದು** = ಹೆಣ್ಣು, ಹೊನ್ನು ಮತ್ತು ಪುಣ್ಯ ಪಾಪಗಳ ಪರಿಣಾಮಗಳನ್ನು ನಾನು ಅರಿತವನಾಗಿದ್ದರೂ ಪಾಪ ಮಾಡಿದೆ.

**ಮದ್ದು** = ಔಷದಿ, ಉಪಾಯ

**Classification:** Keerthane
**Ankita:** sri purandara vittala
**Location:** NA
**Category:** Binnaha, Virakti
**Sub-Category:** Govinda, hennu, hrudaya, bangara, Kshame, tande, papa, punya, bhava, padma, Dhyana, janma,
**Pravachana:** NA
**Explanation:** NA